ನನ್ನ ವಾರಿಗೆಯವರು ಚಪ್ಪಲಿ ಧರಿಸಿಕೊಂಡು ಇಸ್ಕೂಲ್‌ಗೆ ಡಿಕಾವ್ ಆಗಿ ಹೋಗುತ್ತಿದ್ದರೆ ನಾನು ನನ್ನ ಕಾಲೇ ಗಟ್ಟಿ ಎಂದು ತೋರಿಸುತ್ತಾ ಕಲ್ಲು ಮುಳ್ಳು ತುಳಿಯುತ್ತಾ ಹೋಗುತ್ತಿದ್ದೆ. ಕೆಲವೊಮ್ಮೆ ಕಲ್ಲು ಮುಳ್ಳುಗಳು ಮುತ್ತಿಕ್ಕಿ ಕಣ್ಣೀರನ್ನೇ ತರಿಸುತ್ತಿದ್ದವು. ಯಾವುದಕ್ಕೂ ಸಿದ್ಧವಾಗಿಯೇ ಹೆಜ್ಜೆ ಇಡುತ್ತಿದ್ದವ ನಾನು. ಊರ ರೈತರು ಚಪ್ಪಲಿ ಧರಿಸದೆ ರಾಗಿ ಕೂಳೆ, ಗದ್ದೆ ಬಯಲು, ಕಲ್ಲು ಗುಡ್ಡ, ಎಲ್ಲಿಗೆ ಹೋಗಬೇಕಾದರೂ ಬರಿಗಾಲಲ್ಲೇ ನಡೆಯುತ್ತಾ ಬೇಸಿಗೆಯಲ್ಲಿಯೂ ಬರಿಗಾಲಲ್ಲಿ ನಡೆಯುವುದನ್ನು ನೋಡಿದರೆ 'ಕೊಂಡ' ನೆನಪಾಗುತ್ತಿತ್ತು. ಚಪ್ಪಲಿ ಇಲ್ಲದೆ ಒಂದೆಜ್ಜೆಯೂ ಇಡದ ನಗರದ ಜನರಿಗೆ ಇಂತಹ ಅನುಭವ ಎಲ್ಲಿಂದ ಬರಬೇಕು! ಅಮ್ಮನಿಗೋ, ಅಕ್ಕನಿಗೋ ಅಪ್ಪ ಯಾವಾಗಲೋ ಒಮ್ಮೆ ಹೊಸ ಚಪ್ಪಲಿ ತಂದರೆ ಅದು ಬೀರುವ ಪರಿಮಳಕ್ಕೆ ಮೂಗಿನ ಹೊಳ್ಳೆಗಳು ಅಗಲಾಗುತ್ತಿದ್ದವು. ಬಾಕ್ಸ್ ಓಪನ್ ಮಾಡುತ್ತಿದ್ದ ಹಾಗೆ ಅದೇನೋ ಒಂದು ತರದ ವಾಸನೆ, ಆಹಾ! ಈಗಲೂ ಚಪ್ಪಲಿ ರೂಮಿನ ಒಳ ಹೊಕ್ಕರೆ ಬರುವ ಸುವಾಸನೆಯಂತೆ!

ಆಗ ಎಲ್ಲವೂ ನಿಷೇಧದ ಕಾಲ, ಬೇಡ ಬೇಡ ಎನ್ನುವ ಕಾಲದ ಕಟ್ಟಳೆ! ಚಪ್ಪಲಿ ಧರಿಸಿ ಮನೆ ಪ್ರವೇಶಿಸುವಂತಿರಲಿಲ್ಲ. ಚಪ್ಪಲಿ ಧರಿಸಿ ಊಟ ಮಾಡುವಂತಿರಲಿಲ್ಲ. ಹೊಲವನ್ನು ತುಳಿಯುವಂತಿರಲಿಲ್ಲ. ರಾಗಿ ಕಣವನ್ನು ಮೆಟ್ಟು ತುಳಿಯುವಂತಿರಲಿಲ್ಲ. ರೋಣುಗುಂಡನ್ನು ತುಳಿಯುವ ಹಾಗಿರಲಿಲ್ಲ. ಕೈಯಲ್ಲಿ ಚಪ್ಪಲಿ ಮುಟ್ಟುವಂತಿರಲಿಲ್ಲ. ಈಗ ಚಪ್ಪಲಿಗೆ ಒಂದು ಸ್ಥಾನವಿದೆ. ಅದು ಬರೀ ಕಾಲಿಗೆ ಮಾತ್ರವಲ್ಲ. ಭಿಕ್ಷುಕರಾದಿಯಾಗಿ ರಾತ್ರಿಹೊತ್ತು ತಲೆಗೂ ದಿಂಬಿನಂತೆ ಬಳಕೆಯಾಗುವ ಅಡಿಗೂ ಮುಡಿಗೂ ಬಹುಪಯೋಗಿಯಾಗಿ ಬಳಕೆಯಾಗುತ್ತಿದೆ.



ನಡೆದವನ ಜೊತೆಯೇ ಒಡನಾಡಿ ಬರುವ ಚಪ್ಪಲಿಗಳು ನಮ್ಮ ಸಂಗಾತಿಯಂತೆ ಜೊತೆಗೆ ಬರುತ್ತವೆ. ಯಾರು ಬಿಟ್ಟೋದರೂ ತನ್ನ ಸಂಗಡ ಬರುವ ಚಪ್ಪಲಿಗಳು ಕಾಲುಗಳ ನಿತ್ಯ ಸಂಗಾತಿ ಇದ್ದಂತೆ. ಎಲ್ಲ ಕಡೆ ಸ್ವಾತಂತ್ರ್ಯದ ಹೊಂಬೆಳಕು ಬೇಕು.

ಗೌರವಯುತವಾಗಿ ಚಪ್ಪಲಿಗಳನ್ನು ಸ್ವೀಕರಿಸಿ ಟೋಕನ್ ಕೊಟ್ಟು ವಾಪಾಸು ಕೊಡುವ ಕಾಲವಿದು. ದೇವ ಮಂದಿರಗಳಲ್ಲಿ ಮೊದಲು ಎದುರಾಗುವವನೇ ಕಾಯುವ ಕಾಯಕ ಜೀವಿ. ಈ ದೇವನ ದರ್ಶನ ಮಾಡಿಯೇ ನಾವು ಮುಂದಿನ ದೇವರನ್ನು ನೋಡಲು ಮುಂದೆ ಸಾಗಬೇಕು. ಈತನೇ ದೇವಾಲಯಕ್ಕೆ 'ದೀಪ ಧಾರಿ'. ಸಣ್ಣ ಪುಟ್ಟ ದೇವಾಲಯಗಳಲ್ಲಿಯೂ ಭಕ್ತರ ಕಾಲ್ಮರಿಗಳನ್ನು ಭದ್ರವಾಗಿ ಇಟ್ಟು ವಾಪಾಸು ಕೊಡುವ ಐಡಿಯಾ ಯಾರಿಗೆ ಯಾವಾಗ ಬಂತೋ ಗೊತ್ತಿಲ್ಲ. ಶುಚಿತ್ವಕ್ಕೆ ಇರಬೇಕು. ಕೊಳಕನ್ನು ತುಳಿದಂತೆ ಬೆಳಕನ್ನೂ ತುಳಿದಿರುವ ಅದು ಅದರ ಕಾರ್ಯ ಕರ್ಮ. ಆತನಿಗೂ ಒಂದು ಬದುಕು. ಆತನೇ ದೇವಾಲಯದ ಸ್ವಾಗತಕಾರ. ಒಂದು ಕಾಲಕ್ಕೆ ಭಕ್ತ ದೇವಾಲಯದ ಅಂಗಳದಲ್ಲಿದ್ದರೂ ತನ್ನ ಮನಸ್ಸೆಲ್ಲಾ ಬಿಟ್ಟು ಬಂದ ಚಪ್ಪಲಿಗಳ ಮೇಲೆ ಇರುತ್ತಿತ್ತು. ಹಾಗಾಗಿ ಹೋದವರು ಬೇಗ ವಾಪಾಸು ಬಂದು ಬಿಡುತ್ತಿದ್ದರೋ ಏನೋ?

ಎಲ್ಲ ದೇವಾಲಯಗಳಲ್ಲಿ ಜನ ತುಂಬಿರುತ್ತಾರೆ. ಗಂಡನ ಹೆಸರಲ್ಲಿ, ಮಕ್ಕಳು–ಅತ್ತೆಯ ಹೆಸರಿನಲ್ಲಿಯೂ ಪೂಜೆ ಮಾಡಿಸುತ್ತಾ ಹರಕೆ ಮಾಡುವುದನ್ನು ನೋಡಬೇಕು. ಚಪ್ಪಲಿ ಸ್ಟ್ಯಾಂಡ್‌ಗಳಲ್ಲಿ ಜೋಡಿಸಿಟ್ಟ ಹಾಗೆ ಸಾಲು ಸಾಲಾಗಿ ಸಾಗುತ್ತಾ ಮತ್ತೆ ವಾಪಾಸ್ ಚಪ್ಪಲಿ ಸ್ಟ್ಯಾಂಡ್ ಕಡೆಯೇ ಬರಬೇಕು. ಬಿಟ್ಟು, ಬಿಟ್ಟು, ಬಿಟ್ಟರೂ ಮತ್ತೆ ನಮ್ಮ ಜೊತೆ ನೆರಳಂತೆ ಹಿಂಬಾಲಿಸುವ ಒಡಲ ಬಂಡಿಯ ಈ ಚಪ್ಪಲಿ ಅದೆ? ನಮ್ಮೊಳಗೆ ಸಂಬಂಧವನ್ನು ಉಳಿಸಿಕೊಂಡು ಬಂದಿದೆಯಲ್ಲ! ಮಹಾಕಾವ್ಯದಲ್ಲಿ ಅಣ್ಣನಿಗೆ ದಕ್ಕಬೇಕಾದ ರಾಜ್ಯಪೀಠ ಮಂಥರೆಯ 'ಮಾಯಕ'ದ ಮಾತಿನಿಂದ ಕೈಕೆಗೆ ಸಿಲುಕಿ ತಾಯಿಯ ಸಣತಿಯಂತೆ ಅರಣ್ಯವಾಸಿಯಾಗಿದ್ದ ಆ ಪುರೋಷತ್ತಮನ ಪಾದುಕೆಗಳನ್ನು ತಂದು ಸಿಂಹಾಸನದ ಮೇಲಿಟ್ಟು ಗೌರವಾರ್ಥವಾಗಿ ಇಟ್ಟು ಅವನ ನೆನಪಲ್ಲಿ ರಾಜ್ಯ ಭಾರ ಮಾಡಿದ 'ಭರತ', ಶತ್ರುತನವಿಲ್ಲದ ಶತ್ರುಘ್ನನ ಪ್ರೇಮ ಅದೆಂಥದ್ದು. ಚಪ್ಪಲಿಗೂ ಒಂದು ಮೌಲ್ಯ ತಂದು ಕೊಟ್ಟ ಕಾಲವದು. ಹಾಗಾಗಿಯೇ ಹಲವು ಕಡೆ 'ಚಪ್ಪಲಿ ಪೂಜೆಗಳು' ನಡೆಯುತ್ತವೆ.

ಒಮ್ಮೆ ನಗರದ ಮುಖ್ಯಾಧಿಕಾರಿಗಳು ಕಂಡ ಕಂಡಲ್ಲಿ ಅವಸರದ ಮೂತ್ರ ವಿಸರ್ಜನೆ ಮಾಡುವವರನ್ನು ತಡೆಯಲು ಬೋರ್ಡ್ ಬರೆಸಿದರು. 'ಇಲ್ಲಿ ಮೂತ್ರ ವಿಸರ್ಜನೆ ಮಾಡಿದರೆ 500 ದಂಡ ವಿಧಿಸಲಾಗುವುದು' ಎಂದು ದಪ್ಪ ಅಕ್ಷರಗಳಲ್ಲಿ ಕೆತ್ತಿಸಿದರು. ಆದರೂ ಅವಸರಕ್ಕೆ ತಡೆಯುವುದುಂಟೆ? ತಡೆಯಲಾಗದ, ಇಟ್ಟುಕೊಳ್ಳಲಾಗದ ಮೂತ್ರ ನಿಲ್ಲಿಸಿಕೊಳ್ಳಲು ಯಾವ ಸೂತ್ರವೂ ಬರದು. ಜನ ಕೇಳಲಿಲ್ಲ, ಜನ ಬದಲಾಗಲಿಲ್ಲ. ಆಗ ಹೊಳೆದದ್ದೇ, ಚಪ್ಪಲಿ ಸರವನ್ನು ನೇತು ಹಾಕುವುದು. ಹಳೆಯ ಚಪ್ಪಲಿ ಸರ ಮಾಡಿ ನೇತು ಹಾಕಿದರು. ಜನ ಯಾರೂ ಅತ್ತ ಸುಳಿಯಲಿಲ್ಲ. ಅಕ್ಷರ ಮಾಧ್ಯಮಕ್ಕೆ ಅಷ್ಟೊಂದು ಮಾನ್ಯತೆ ಕೊಡದ ಜನ 'ದೃಶ್ಯ'ವನ್ನು ಬೇಗ ಅರ್ಥ ಮಾಡಿಕೊಳ್ಳುತ್ತಾರೆ. ಈಗಿನ ಹಾಗೆ ಕೋಲು ಹಿಡಿದು ಊಟಕ್ಕೆ ಕೂತರೆ ನಾಯಿ ಸುಳಿಯದು.


ಈಗಲೂ ಅಲ್ಲಲ್ಲಿ 'ಚಪ್ಪಲಿಯಲ್ಲಿ ಹೊಡೆ' ಎಂಬುದು ಏಸೆತವೂ ಆಗಿರುತ್ತದೆ. ಹತ್ತಿರದಿಂದ ಹೊಡೆಯುವುದಕ್ಕಿಂತ ದೂರದಿಂದ ಎಸೆಯುವುದರಲ್ಲಿ ನಮ್ಮ ನಾಗರಿಕರು ಹೆಚ್ಚು ನಂಬಿಕೆ ಇಟ್ಟುಕೊಂಡಂತೆ ಇದೆ. ಅದರಲ್ಲಿ ಹಲವು ಕೌಶಲ್ಯವನ್ನು ರೂಢಿಸಿಕೊಂಡಿದ್ದಾರೆ. ಕ್ರಿಕೆಟ್ ಪಂದ್ಯ ಸೋತರೆ, ರಾಜಕೀಯದಲ್ಲಿ ಎದುರಾಳಿಯ ಮುಂದೆ ಸೋತರೆ, ಹೀಗೆ ಬೇರೆ ಬೇರೆ ಸಂದರ್ಭದಲ್ಲಿ ತಲೆ ಕೆಟ್ಟವರಿಗೆ ತಕ್ಷಣಕ್ಕೆ ಕೈಗೆ ಸಿಗುವುದು ಕೆರವೇ ಆಗಿದೆ. ಕೋಪಕ್ಕೆ ಮೊಬೈಲ್ ಎಸೆಯುವ ಕಾಲ ಎಂದು ಬರಬಹುದು?

ನಾವು ಹೋದ ಕಡೆಯೆಲ್ಲ ಸುತ್ತಾಡಿ ಒಳ್ಳೆಯದನ್ನು ಕೆಟ್ಟದ್ದನ್ನು ತುಳಿದು ಅಂಟಿಸಿಕೊಂಡು ಬಂದಿರುವ ತಳದ ಕಾವಲುಗಾರ ಚಪ್ಪಲಿಯ ತಾಳ್ಮೆಯನ್ನು ಮೆಚ್ಚಬೇಕು. ಜಗಳವಾಡುವಾಗ ಹಾಕಿದ್ದ ಚಪ್ಪಲಿಯನ್ನೇ ತೆಗೆದು 'ಪಟಾ ಪಟ್' ಎಂದು ಬಾರಿಸುವವನ ಕೋಪ ನೋಡಿದವರಿಗೆ, ನೋಡುವ ಬಗೆ ಬೇರೆಯಾಗಿರುತ್ತದೆ. ಆ ಕಾಲಕ್ಕೆ ಚಪ್ಪಲಿಯಲ್ಲಿ ಒದೆ ತಿಂದವನು ಹೋಮ ಹವನ ಯಜ್ಞಗಳನ್ನು ಮಾಡಿಸಿಕೊಂಡು ಮನೆ ಸೇರಬೇಕಿತ್ತು. ಪಾದಕ್ಕೆ ತಾಕಿಸಿಕೊಳ್ಳದೆ ಎಲ್ಲವನ್ನು ಚಪ್ಪಲಿಯ ಅಂಡು ಕೊಳಕು, ಮಲಮೂತ್ರವನ್ನು ಅಂಟಿಸಿಕೊಂಡೇ ಸಾಗುವ ಜಲಗಾರರು ನಾಡಿನ ಆಸ್ತಿಯಲ್ಲವೇ?

ಈ ಚಪ್ಪಲಿಯ ಪುರಾಣ ಸಂಬಂಧ ಬೆಳೆಯುತ್ತಲೇ ಇರುತ್ತದೆ. ಚಪ್ಪಲಿ ಧರಿಸಿ ನಡೆದರೆ ಪಾಪ ಎಂಬ ಕಾಲವೂ ಸರಿದುಹೋಗಿದೆ. ಈಗ ಹುಟ್ಟುವ ಮಕ್ಕಳಿಗೆ ನಿಲ್ಲುವ, ನಡೆಯುವ ಶಕ್ತಿ ಬಂದ ದಿನದಿಂದಲೇ ಸಂಗೀತ ಗುನುಗುವ ಚಪ್ಪಲಿಗಳು ಮಗುವಿಗೆ ಮೊದಲ ಹೆಜ್ಜೆಗೆ ಕಾಲ್ಗೆಜ್ಜೆಯಾಗಿ ಹೊಂದಿಕೊಂಡೇ ಬರುತ್ತವೆ.

ಈಗ ಬಿಡುಗಡೆಯ ಕಾಲ, ಚಪ್ಪಲಿಗೂ ಸ್ವಾತಂತ್ರ್ಯ ಬಂದಿದೆ. ಚುನಾವಣೆಯಲ್ಲಿ ಒಬ್ಬ ಉಮೇದುವಾರ ಚಪ್ಪಲಿ ಗುರುತಲ್ಲಿ ಸ್ಪರ್ಧೆ ಮಾಡಿದ್ದ. ಎಲ್ಲರಿಗೂ ಬೇಗ ಗೊತ್ತಾಗುತ್ತದೆ ಎಂದು ಆತನ ಅನುಭವ. 'ಚಪ್ಪಲಿಗೆ ಓಟು ಕೊಡಿ, ಚಪ್ಪಲಿಗೆ ಓಟು ಕೊಡಿ' ಎಂದು ಪ್ರಚಾರ ಶುರುಮಾಡಿದರು. ವಿರೋಧಿ ಗುಂಪುಗಳು ಚಪ್ಪಲಿಯ ಗುರುತನ್ನು ಹೀಯಾಳಿಸಿದರು. ಅಂತಿಮವಾಗಿ ಚಪ್ಪಲಿ ಗುರುತು ವಿವಾದವಾಯಿತು.

ಚಪ್ಪಲಿ ಧರಿಸಿಯೇ ಹೊಲ ಉಳುವ, ಚಪ್ಪಲಿ ಧರಿಸಿಯೇ ಅಡುಗೆ ಮಾಡುವ ದಿನಗಳಿವು. ಬಾತ್ ರೂಮಿಗಾಗಲಿ, ಬಾತ್ ಮಾಡುವ ರೂಮಿಗಾಗಲಿ ಚಪ್ಪಲಿ ನಿಷೇಧವಿಲ್ಲ. ಹಿಂದೆ ಚಪ್ಪಲಿಯಲ್ಲಿ ಒದೆ ತಿಂದವನು ಪಾಪಿ ಎನ್ನುವಂತಿತ್ತು. ಈಗ ಚಪ್ಪಲಿ ಸೋಕಿದರೆ ಸಾರಿ ಸಾರಿ ಎಂದು ಮುಂದೆ ಸಾಗುವ ಕಾಲವಿದು. ಅಂದು ಹರಳಯ್ಯ ದಂಪತಿಗಳು ಅಣ್ಣನಿಗೆ ತಮ್ಮ ತೊಡೆಯ ಚರ್ಮವನ್ನೇ ಕುಯ್ದು ಚಪ್ಪಲಿ ಮಾಡಿಕೊಟ್ಟ ಭಕ್ತಿಯ ಪರಾಕಾಷ್ಠೆಯ ನಾಡಿದು. ಅಣ್ಣನೋ ತಲೆ ಮೇಲೆ ಪಾದುಕೆಗಳನ್ನು ಹೊತ್ತು ಸಾಗಿ ಶಿವಾಲಯದಲ್ಲಿ ಇಟ್ಟು ಪೂಜಿಸಿದ 'ಅನುಭವ ಮಂಟಪ'ದೊಳಗೆ ಕೂಡಿಕೊಂಡು ಬೆಳೆದ ಪರಿಯನ್ನು ತಿಳಿಯಬೇಕು. ಗುಲ್ಬರ್ಗ ಜಿಲ್ಲೆಯ ಹರಳಯ್ಯನ ಊರಲ್ಲಿ ಈಗಲೂ ಆತ ಮಾಡಿಕೊಟ್ಟ ಚಪ್ಪಲಿಗಳನ್ನು ಪೂಜಿಸುತ್ತಿರುವುದನ್ನು ನೋಡುತ್ತಿದ್ದೇವೆ. ಚಪ್ಪಲಿ ಸೇವೆಯ ಹೆಸರಲ್ಲಿ ಅಲ್ಲಲ್ಲಿ ಪೂಜೆಗಳು ನಡೆಯುತ್ತಿವೆ. ಬಿಳಿಗಿರಿ ರಂಗನಾಥ ಸ್ವಾಮಿಯ ಚಮ್ಮಾವುಗೆಗಳನ್ನು ಭಕ್ತರು ಪೂಜಿಸುತ್ತಾರೆ.



ಪ್ರಾಣಿಗಳ ಮಾಂಸ, ಉಗುರು, ದಂತ, ಕಾಲು ಕೈ ಕೊಂಬು ಎಲ್ಲವನ್ನು